**III Semester 3 Year LL.B./VII Semester 5 Year B.A.LL.B. (Maj.-Min.-System)/ VII Semester 5 Year B.A.LL.B./B.B.A.LL.B. Examination, June/July 2019**

# LABOUR LAW
## (Old and New)

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written **either** in **English** or **Kannada completely.**

Q. No. 1. Define 'Industrial Dispute'. When an individual dispute becomes an Industrial dispute ? Marks : 16

'ಕೈಗಾರಿಕಾ ವಿವಾದವನ್ನು ವ್ಯಾಖ್ಯಾನಿಸಿ. ವೈಯಕ್ತಿಕ ವಿವಾದವು ಯಾವಾಗ ಕೈಗಾರಿಕಾ ವಿವಾದವಾಗುತ್ತದೆ ?

Q. No. 2. Explain the impact of Industrial Jurisprudence on Labour Welfare Legislations. Marks : 16

ಕಾರ್ಮಿಕ ಕಲ್ಯಾಣ ಶಾಸನಗಳ ಮೇಲೆ ಕೈಗಾರಿಕಾ ನ್ಯಾಯಶಾಸ್ತ್ರದ ಪ್ರಭಾವವನ್ನು ವಿವರಿಸಿ.

Q. No. 3. Discuss the provisions relating to "Retrenchment" under the Industrial Disputes Act, 1947. Marks : 16

ಔದ್ಯೋಗಿಕ ವಿವಾದಗಳ ಅಧಿನಿಯಮ 1947ರಡಿಯಲ್ಲಿ "ಕಾರ್ಮಿಕರ ವಜಾ" ಕುರಿತು ಉಪಬಂಧಗಳನ್ನು ಚರ್ಚಿಸಿ.

Q. No. 4. Define "Trade Union". Examine the extent of immunities available to registered trade union from civil and criminal liabilities. Marks : 16

ಕಾರ್ಮಿಕ ಸಂಘವನ್ನು ವ್ಯಾಖ್ಯಾನಿಸಿ. ನೋಂದಾಯಿತ ಕಾರ್ಮಿಕ ಸಂಘಕ್ಕೆ ಲಭ್ಯವಿರುವ ಸಿವಿಲ್ ಮತ್ತು ಕ್ರಿಮಿನಲ್ ಉನ್ಮುಕ್ತಿಗಳನ್ನು ಪರೀಕ್ಷಿಸಿ.

Q. No. 5. Explain the various authorities provided under the E.S.I. Act, 1948. Marks : 16

E.S.I. ಕಾಯ್ದೆ 1948ರ ಪ್ರಕಾರ ರಚಿಸಲ್ಪಟ್ಟಿರುವ ವಿವಿಧ ಪ್ರಾಧಿಕಾರಗಳನ್ನು ವಿವರಿಸಿ.

Q. No. 6. Briefly explain the provisions relating to health under the Factories Act, 1948. Marks : 16

ಕಾರ್ಖಾನೆಗಳ ಅಧಿನಿಯಮ 1948ರ ಪ್ರಕಾರ ಆರೋಗ್ಯಕ್ಕೆ ಸಂಬಂಧಿಸಿದಂತೆ ಇರುವ ಉಪಬಂಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 7. Explain the permissable deductions under Payment of Wages Act, 1936. Marks : 16

ವೇತನ ಸಂದಾಯ ಅಧಿನಿಯಮ, 1936ರ ಅಡಿಯಲ್ಲಿ ನೀಡಿರುವ ಅನುಜ್ಞಾರ್ಹ ಕಡಿತಗಳನ್ನು ವಿವರಿಸಿರಿ.

Q. No. 8. Write short note on **any two** of the following : Marks : 2×8=16

ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Strike.
ಮುಷ್ಕರ.

(b) Maternity benefit.
ಹೆರಿಗೆಯ ಸೌಲಭ್ಯ.

(c) Lay off.
ಉದ್ಯೋಗ ಬಂಧಿ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ :

(a) Sumanth a workman while performing the duty of the employer died due to an accident. It was proved that at the time of accident Sumanth was under the influence of intoxication. Whether the employer is liable to pay compensation ? Discuss.

ಸುಮಂತ್ ಎಂಬ ಕಾರ್ಮಿಕ ತನ್ನ ಮಾಲೀಕನ ಕಾರ್ಯನಿರ್ವಹಿಸುವಾಗ ಅಪಘಾತದಿಂದ ಮರಣ ಹೊಂದುತ್ತಾನೆ. ಅಪಘಾತ ಸಂಭವಿಸಿದಾಗ ಸುಮಂತನು ಮದ್ಯದ ಅಮಲಿನಲ್ಲಿ ಇದ್ದ ಎಂಬುದು ಸಾಬೀತಾಗುತ್ತದೆ. ಇಲ್ಲಿ ಮಾಲೀಕ ಪರಿಹಾರ ಕೊಡಲು ಬಾಧ್ಯನೇ ? ಚರ್ಚಿಸಿ.



(b) The workers of a registered trade union declared illegal strike. Due to illegal strike employer sustained the loss. Employer filed a suit against the trade union for the recovery of compensation. Will he succeed ?

ನೋಂದಾಯಿತ ಕಾರ್ಮಿಕ ಸಂಘದ ಕಾರ್ಮಿಕರು ಕಾನೂನುಬಾಹಿರವಾಗಿ ಮುಷ್ಕರ ಘೋಷಿಸಿದರು. ಈ ಮುಷ್ಕರದಿಂದಾಗಿ ಮಾಲೀಕನು ನಷ್ಟವನ್ನು ಅನುಭವಿಸಿದನು. ನಷ್ಟ ಪರಿಹಾರ ವಸೂಲಾತಿಗಾಗಿ ಮಾಲೀಕನು ಕಾರ್ಮಿಕ ಸಂಘದ ವಿರುದ್ಧ ದಾವೆಯನ್ನು ಹೂಡುತ್ತಾನೆ. ಮಾಲೀಕ ಯಶಸ್ವಿ ಆಗುವನೇ ?

(c) Workmen immediately after reporting to duty against the will of the employer, leave the place of employment to attend the funeral ceremony of ex-employee. Employer treats the act of the workmen as illegal strike. Decide.

ಕಾರ್ಮಿಕರು ಕೆಲಸಕ್ಕೆ ಹಾಜರಾದ ತಕ್ಷಣ ಮಾಲೀಕನ ಇಚ್ಛೆಯ ವಿರುದ್ಧವಾಗಿ ಹಿಂದಿನ ನೌಕರನೊಬ್ಬನ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲು ಕೆಲಸದ ಸ್ಥಳದಿಂದ ಹೊರಟು ಹೋಗುತ್ತಾರೆ. ಮಾಲೀಕ ಕಾರ್ಮಿಕರ ವರ್ತನೆಯನ್ನು ಕಾನೂನುಬಾಹಿರ ಮುಷ್ಕರ ಎಂದು ಪರಿಗಣಿಸುತ್ತಾನೆ. ನಿರ್ಣಯಿಸಿ.

---

**VII Semester 5 Years B.A. LL.B. (Maj.-Min.)/B.B.A. LL.B.**
**Examination, December 2019**
**LABOUR LAW – I (Old/New)**

Duration : 3 Hours Max. Marks : 100

**Instructions :** 1. Answer Q. No. **9** and **any** other **five** of the remaining.
2. Q. No. **9** carries **20** marks and other questions carry **16** marks **each**.
3. Answers should be written **completely** either in **English** or in **Kannada.**

Q. No. 1. Discuss the procedure for registration of a Trade Union. When can it be cancelled ? Marks : 16

ಕಾರ್ಮಿಕ ಸಂಘಟನೆಯ ನೋಂದಾವಣೆಗಾಗಿ ಇರುವ ಪ್ರಕ್ರಿಯೆಗಳನ್ನು ಚರ್ಚಿಸಿ. ಯಾವಾಗ ನೋಂದಾವಣೆಯನ್ನು ರದ್ದುಪಡಿಸಬಹುದು ?

Q. No. 2. What is retrenchment ? Discuss the provisions as to retrenchment. Marks : 16

'ವಜಾಮಾಡುವಿಕೆ' ಎಂದರೇನು ? ವಜಾಮಾಡುವಿಕೆಯಲ್ಲಿನ ಉಪಬಂಧಗಳನ್ನು ಚರ್ಚಿಸಿರಿ.

Q. No. 3. Explain the powers and procedure of Commissioners under Employees' Compensation Act, 1923. Marks : 16

ನೌಕರರ ಪರಿಹಾರ ಕಾಯ್ದೆ, 1923 ರಲ್ಲಿ ಆಯುಕ್ತರ ಅಧಿಕಾರ ಮತ್ತು ಪ್ರಕ್ರಿಯೆಗಳನ್ನು ವಿವರಿಸಿರಿ.

Q. No. 4. Explain the conditions for availing the benefits under the Employees' State Insurance Act, 1948. Marks : 16

ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948 ರಲ್ಲಿ ವಿವಿಧ ಸೌಲಭ್ಯಗಳನ್ನು ಪಡೆಯಲು ಇರುವ ಷರತ್ತುಗಳನ್ನು (ಉಪಬಂಧಗಳನ್ನು) ವಿವರಿಸಿ.

Q. No. 5. State the objectives of Industrial Employment Standing Orders Act, 1946. Explain the provisions of modification of standing orders. Marks : 16

ಔದ್ಯೋಗಿಕ ವೃತ್ತಿಯ ಸ್ಥಾಯೀ ಆದೇಶಗಳ ಕಾಯ್ದೆ, 1946 ರ ಉದ್ದೇಶಗಳನ್ನು ತಿಳಿಸಿ. ಸ್ಥಾಯೀ ಆದೇಶದ ತಿದ್ದುಪಡಿ ಉಪಬಂಧಗಳನ್ನು ವಿವರಿಸಿ.

Q. No. 6. What are the permissible deductions from payment of wages ? Explain. Marks : 16

ವೇತನ ಪಾವತಿಯಿಂದ ಮಾಡಲಾಗುವ ಅಂಗೀಕೃತ ಕಡಿತಗಳೇನು ? ವಿವರಿಸಿ.

Q. No. 7. Discuss the provisions under Factories Act, 1948 regarding working hours and annual leave with wages. Marks : 16

ಕಾರ್ಖಾನೆಗಳ ಕಾಯ್ದೆ, 1948 ರಲ್ಲಿನ ಕೆಲಸದ ಸಮಯಗಳು ಮತ್ತು ವಾರ್ಷಿಕ ವೇತನಸಹಿತ ಇರುವ ವಾರ್ಷಿಕ ರಜೆಗಳ ಬಗ್ಗೆ ಇರುವ ಉಪಬಂಧಗಳನ್ನು ಚರ್ಚಿಸಿ.

Q. No. 8. Write short notes on **any two** : Marks : 8x2=16

ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ :

a) Problems of collective bargaining in India.
ಭಾರತದಲ್ಲಿ ಸಾಮೂಹಿಕ ಚೌಕಾಸಿಯಲ್ಲಿನ ಸಮಸ್ಯೆಗಳು.

b) Award and settlement.
ಐತೀರ್ಪು ಮತ್ತು ಇತ್ಯರ್ಥ.

c) Lay-off.
ಉದ್ಯೋಗಬಂಧಿ.

Q. No. 9. Answer **any two** of the following : Marks : 10x2=20

ಈ ಕೆಳಗಿನ ಯಾವುದಾದರೂ ಎರಡನ್ನು ಉತ್ತರಿಸಿ :

a) In view of disputes relating to wage revision between employer and employees, the employer and workmen decided to refer the matter to arbitration. The arbitration process concluded and it submitted its report to appropriate government. The appropriate government published the award on 15th January, 2018. On 26th January, the employees in view of not being satisfied with the award, decided to go on strike. Is it valid ? Give reasons.
ನಿಯೋಜಕ ಮತ್ತು ನೌಕರರ ಮಧ್ಯೆ ವೇತನ ಪರಿಷ್ಕರಣೆ ವಿಷಯದಲ್ಲಿ ವಿವಾದವುಂಟಾಗಿದ್ದರಿಂದ, ನಿಯೋಜಕನು ಮತ್ತು ಕಾರ್ಮಿಕರು ಈ ವಿವಾದವನ್ನು ಬಗೆಹರಿಸಲು ಮಧ್ಯಸ್ಥಗಾರಿಕೆ ಪ್ರಕ್ರಿಯೆಗೆ ಮೊರೆಹೋಗುತ್ತಾನೆ. ಮಧ್ಯಸ್ಥಗಾರಿಕೆ ಪ್ರಕ್ರಿಯೆಯು ಪೂರ್ಣಗೊಂಡು, ಅದರ ವರದಿಯನ್ನು ಸೂಕ್ತ ಸರ್ಕಾರಕ್ಕೆ ಸಲ್ಲಿಸಲಾಯಿತು. ಸೂಕ್ತ ಸರಕಾರವು 2018 ರ ಜನವರಿ 15 ರಂದು ಈ ವರದಿಯನ್ನು (ಐತೀರ್ಪು) ಪ್ರಕಟಿಸಿತು. ಜನವರಿ 26, ರಂದು ಈ ಐತೀರ್ಪಿನಲ್ಲಿ ಅಸಮಾಧಾನವಿದ್ದುದರಿಂದ ನೌಕರರು ಮುಷ್ಕರ ಹೂಡುವುದಾಗಿ ತೀರ್ಮಾನಿಸಿದರು. ಇದು ಕ್ರಮಬದ್ಧವೇ ? ಕಾರಣಗಳನ್ನು ನೀಡಿ.



b) Devayya, a worker was working in Ramdev Industries. On 14th September 2009 in view of some quarrel with Vishnu, a fellow workmen, Devayya was pushed off the stairs and got seriously injured. Discuss the rights of Devayya to compensation under Employees' Compensation Act, 1923.
ದೇವಯ್ಯನು ರಾಮ್‌ದೇವ್ ಉದ್ಯಮ ಸಂಸ್ಥೆಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿರುತ್ತಾನೆ. ಸೆಪ್ಟೆಂಬರ್ 14, 2009 ರಂದು ತನ್ನ ಸಹ ಕಾರ್ಮಿಕ ವಿಷ್ಣುವಿನೊಂದಿಗೆ ಜಗಳದಿಂದಾಗಿ ವಿಷ್ಣುನು ದೇವಯ್ಯನನ್ನು ಮೆಟ್ಟಿಲಿನಲ್ಲಿ ಇಳಿಯುವಾಗ ದೂಡುತ್ತಾನೆ. ಇದರಿಂದಾಗಿ ದೇವಯ್ಯನು ಬಿದ್ದು ಗಂಭೀರ ಗಾಯಗೊಳ್ಳುವನು. ನೌಕರರ ಪರಿಹಾರ ಕಾಯ್ದೆ, 1923 ರಲ್ಲಿ ನಷ್ಟ ಪರಿಹಾರಕ್ಕಾಗಿ ದೇವಯ್ಯನಿಗಿರುವ ಹಕ್ಕನ್ನು ಕುರಿತು ಚರ್ಚಿಸಿ.

c) The employer in view of pressure of work decided to call a certain Sunday as working day. The workmen agreed to work. The employer instead of declaring any other day as compensatory holiday, decided to pay extra wages for the Sunday worked. Decide its validity.
ನಿಯೋಜಕನು ತನ್ನ ಕಾರ್ಖಾನೆಯಲ್ಲಿನ ಕೆಲಸದ ಒತ್ತಡದಿಂದಾಗಿ ಒಂದು ನಿರ್ದಿಷ್ಟ ಭಾನುವಾರದಂದು ಕೆಲಸದ ದಿನ ಎಂದು ನಿರ್ಧರಿಸುತ್ತಾನೆ. ಕಾರ್ಮಿಕರು ಕೆಲಸ ಮಾಡಲು ಒಪ್ಪುತ್ತಾರೆ. ನಿಯೋಜಕನು ಇದಕ್ಕೆ ಬದಲಿಯಾಗಿ ಒಂದು ಪರಿಹಾರ ರಜೆ ನೀಡುವ ಬದಲಾಗಿ ಆ ದಿನಕ್ಕೆ ಹೆಚ್ಚಿನ ವೇತನ ನೀಡುವುದಾಗಿ ತೀರ್ಮಾನಿಸುತ್ತಾನೆ. ಇದರ ಕ್ರಮಬದ್ಧತೆಯನ್ನು ನಿರ್ಧರಿಸಿ.

0302/0722/2052

**III Semester 3 Year LL.B./VII Semester 5 Year B.A. LL.B. (Maj.-Min. System)/ VII Semester 5 Year B.A.LL.B./B.B.A.LL.B. Examination, December 2019**

**LABOUR LAW**

**(Old/New)**

Duration : 3 Hours | Max. Marks : 100

**Instructions** : 1. Answer Question No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written **either** in English or Kannada **completely**.

Q. No. 1. Define 'strike' and 'lock out' and distinguish between them. Marks : 16
'ಮುಷ್ಕರ' ಮತ್ತು 'ಬೀಗ ಮುದ್ರೆ' ಯನ್ನು ವ್ಯಾಖ್ಯಾನಿಸಿ ಮತ್ತು ಅವುಗಳನ್ನು ವ್ಯತ್ಯಾಸಿಸಿ.

Q. No. 2. Discuss the provisions relating to 'Health' under Factories Act, 1948. Marks : 16
1948 ಕಾರ್ಖಾನೆ ಕಾಯಿದೆಯಡಿಯಲ್ಲಿ 'ಆರೋಗ್ಯ'ಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿ.

Q. No. 3. Define 'Trade Union'. Examine the extent of immunities available to registered trade union from civil and criminal liabilities. Marks : 16
'ಕಾರ್ಮಿಕ ಸಂಘ' ವನ್ನು ವ್ಯಾಖ್ಯಾನಿಸಿರಿ. ಕಾರ್ಮಿಕ ಸಂಘಕ್ಕೆ ಸಿವಿಲ್ ಹಾಗೂ ಕ್ರಿಮಿನಲ್ ಬಾಧ್ಯತೆಯಿಂದ ದೊರೆಯುವ ಉನ್ಮುಕ್ತಿಯ ವ್ಯಾಪ್ತಿಯನ್ನು ಪರೀಕ್ಷಿಸಿರಿ.

Q. No. 4. Write an explanatory note on "Medical Benefit Council" under Employees State Insurance Act. Marks : 16
ಕಾರ್ಮಿಕರ ರಾಜ್ಯ ವಿಮಾ ಅಧಿನಿಯಮದಡಿಯಲ್ಲಿನ "ವೈದ್ಯಕೀಯ ಪ್ರಯೋಜನ ಪರಿಷತ್ತಿನ" ಬಗ್ಗೆ ವಿಸ್ತೃತವಾದ ಟಿಪ್ಪಣಿ ಬರೆಯಿರಿ.

Q. No. 5. Discuss the definition of 'Industry' with the help of decided cases. Marks : 16
ನಿರ್ಣಿತ ಪ್ರಕರಣಗಳ ಸಹಾಯದಿಂದ "ಉದ್ದಿಮೆ"ಯ ವ್ಯಾಖ್ಯಾನವನ್ನು ಚರ್ಚಿಸಿರಿ.

P.T.O.

Q. No. 6. Explain the theory of Notional Extension of Employer's Premises, with the help of decided cases. Marks : 16
ಮಾಲಿಕನ ಆವರಣಗಳ ಕಾಲ್ಪನಿಕ ವಿಸ್ತರಣೆಯ ಸಿದ್ಧಾಂತವನ್ನು ತೀರ್ಮಾನಿಸಿದ ಪ್ರಕರಣಗಳ ಸಹಾಯದಿಂದ ವಿವರಿಸಿರಿ.

Q. No. 7. Define 'Wages'. Explain the provisions relating to fixation and payment of wages. Marks : 16
'ವೇತನ'ವನ್ನು ವ್ಯಾಖ್ಯಾನಿಸಿ. ವೇತನದ ನಿರ್ಧರಣೆ ಮತ್ತು ಪಾವತಿಯ ಕುರಿತಾದ ಉಪಬಂಧಗಳನ್ನು ವಿವರಿಸಿ.

Q. No. 8. Write note on **any two** of the following : Marks : 8×2=16
ಯಾವುದಾದರೂ ಎರಡರ ಬಗ್ಗೆ ಟಿಪ್ಪಣಿ ಬರೆಯಿರಿ :

a) Retrenchment.
ವಜಾಮಾಡುವಿಕೆ.

b) Cancellation of registration of trade union.
ಕಾರ್ಮಿಕ ಸಂಘದ ನೋಂದಣಿಯ ರದ್ದತಿ.

c) Labour court.
ಕಾರ್ಮಿಕ ನ್ಯಾಯಾಲಯ.

Q. No. 9. Solve **any two** of the following problems : Marks : 10×2=20
ಯಾವುದಾದರೂ ಎರಡನ್ನು ಬಗೆಹರಿಸಿ :

a) A boy was employed by the factory as tea boy and it was part of his duty to take tea from the shop which was situated outside the factory gate to various persons working in the factory. One day when the boy was coming out of the factory after serving tea to the workers he passed through a violent mob of factory workers who were leaving the factory. This mob attacked the police and the police had to fire upon the mob in self-defence. Unfortunately the boy was severely wounded by a bullet and died on the following day in the hospital. Now the mother of the boy claims compensation. Decide by giving reasons.
ಒಂದು ಕಾರ್ಖಾನೆಯು ಒಬ್ಬ ಬಾಲಕನನ್ನು ಆ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರಿಗೆ ಚಹಾ ತರಲು ನೇಮಕ ಮಾಡಿತ್ತು. ಆ ಬಾಲಕನು ಆ ಕಾರ್ಖಾನೆಯ ಪ್ರವೇಶ ದ್ವಾರದ ಹೊರಗಡೆ ಇರುವ ಚಹಾ ಅಂಗಡಿಯಿಂದ ಕಾರ್ಖಾನೆಯ ಕಾರ್ಮಿಕರಿಗೆ ಚಹಾ ತರಬೇಕಾಗಿತ್ತು. ಹೀಗಿರುತ್ತಾ ಒಂದು ದಿವಸ ಕಾರ್ಖಾನೆಯ ಕಾರ್ಮಿಕರಿಗೆ ಚಹಾ ತರಲು ಬಾಲಕನು ಕಾರ್ಖಾನೆಯ ಪ್ರವೇಶ ದ್ವಾರದ ಹೊರಗಡೆ ಬರುವಾಗ ದ್ವಾರದ ಹೊರಗಡೆ ಹಿಂಸಾರೂಪ ತಾಳಿದ ಸದ್ರಿ



ಕಾರ್ಖಾನೆಯ ಕಾರ್ಮಿಕರ ಗುಂಪನ್ನು ದಾಟುತ್ತಾನೆ. ಈ ಗುಂಪು ಆರಕ್ಷಕರ ಮೇಲೆ ದಾಳಿ ಮಾಡಿದಾಗ ಆರಕ್ಷಕರು ಅವರ ಸ್ವರಕ್ಷಣೆಗೆ ಗುಂಪಿನ ಮೇಲೆ ಗೋಲೀಬಾರು ಮಾಡುತ್ತಾರೆ. ಈ ಸಂದರ್ಭದಲ್ಲಿ ಕಾರ್ಖಾನೆಯ ಕಾರ್ಮಿಕರಿಗೆ ಚಹಾ ತರಲು ತೆರಳಿದ್ದ ಬಾಲಕನು ದುರದೃಷ್ಟವಶಾತ್ ಆರಕ್ಷಕರ ಗೋಲೀಬಾರಿನಿಂದ ಗಂಭೀರವಾಗಿ ಗಾಯಗೊಂಡು ಮರುದಿವಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅಸು ನೀಗುತ್ತಾನೆ. ಈಗ ಬಾಲಕನ ತಾಯಿ ಕಾರ್ಖಾನೆಯ ವಿರುದ್ಧ ಪರಿಹಾರ ಕೇಳಿ ದಾವೆ ಹೂಡುತ್ತಾಳೆ. ಕಾರಣ ಸಹಿತ ನಿರ್ಧರಿಸಿರಿ.

b) 37 women are employed in Seema Industries near Narasapur. Since only 4 women workers were having children below the age of 6 years, the Manager of the industry refuses to provide creches for the children. Is the refusal correct ? Quote the relevant provision.
ನರಸಾಪುರ ಹತ್ತಿರ ಇರುವ ಸೀಮ ಇಂಡಸ್ಟ್ರೀಸ್‌ನಲ್ಲಿ 37 ಹೆಂಗಸರನ್ನು ನೇಮಕ ಮಾಡಿರುತ್ತಾರೆ. ಅವರಲ್ಲಿ ನಾಲ್ಕು ಹೆಂಗಸರಿಗೆ ಮಾತ್ರ 6 ವರುಷಕ್ಕಿಂತ ಚಿಕ್ಕ ಮಕ್ಕಳಿರುತ್ತಾರೆ. ಆದ್ದರಿಂದ ಕಾರ್ಖಾನೆಯ ನಿರ್ವಾಹಕರು, ಕಾರ್ಖಾನೆಯಲ್ಲಿ ಶಿಶುಪಾಲನಾ ಕೇಂದ್ರವನ್ನು ಒದಗಿಸಲು ನಿರಾಕರಿಸುತ್ತಾನೆ. ಈ ನಿರಾಕರಣೆ ನ್ಯಾಯಬದ್ಧವೇ ? ಸೂಕ್ತವಾದ ಉಪಬಂಧವನ್ನು ನಮೂದಿಸಿ.

c) The workers of a registered trade union declared illegal strike. Due to illegal strike employer sustained the loss. Employer filed a suit against the trade union for the recovery of compensation. Will he succeed ? Decide.
ನೋಂದಣಿ ಆದ ಕಾರ್ಮಿಕ ಸಂಘದ ಕಾರ್ಮಿಕರು ಕಾನೂನು ಬಾಹಿರ ಮುಷ್ಕರವನ್ನು ಘೋಷಿಸಿದರು. ಕಾನೂನು ಬಾಹಿರ ಮುಷ್ಕರದ ಕಾರಣದಿಂದಾಗಿ ಮಾಲಿಕನು ನಷ್ಟವನ್ನು ಅನುಭವಿಸಿದನು. ಪರಿಹಾರದ ವಸೂಲಾತಿಗಾಗಿ ಮಾಲಿಕನು ಕಾರ್ಮಿಕ ಸಂಘದ ವಿರುದ್ಧ ದಾವೆಯನ್ನು ಹೂಡಿದನು. ಅವನು ಯಶಸ್ವಿ ಆಗುವನೇ ? ತೀರ್ಮಾನಿಸಿ.

**II Semester 3 Year LL.B. Examination, June/July 2019**
**LABOUR LAW – I**
**(2018 Batch)**

Duration : 3 Hours Max. Marks : 80

**Instructions** : 1. Answer **all five** Units.

2. **One** essay type question and short note/problem is **compulsory** from **each** Unit.

3. Answer should be written either in **English** or **Kannada completely.**

UNIT – 1

Q. No. 1. a) What is Trade Unionism ? Explain the growth of Trade Unionism. Marks : 10
ಕಾರ್ಮಿಕ ಸಂಘಟನೆ ಎಂದರೇನು ? ಕಾರ್ಮಿಕ ಸಂಘಟನೆಯ ಬೆಳವಣಿಗೆಯನ್ನು ವಿವರಿಸಿ.

OR

Explain the immunities of registered trade unions.
ನೋಂದಾಯಿತ ಕಾರ್ಮಿಕ ಸಂಘಗಳ ವಿನಾಯಿತಿಗಳನ್ನು ವಿವರಿಸಿ.

Q. No. 1. b) Write short note on **any one** : Marks : 6
ಯಾವುದಾದರೂ ಒಂದಕ್ಕೆ ಲಘು ಟಿಪ್ಪಣಿ ಬರೆಯಿರಿ :

Definition of trade union.
ಕಾರ್ಮಿಕ ಸಂಘದ ವ್ಯಾಖ್ಯೆ.

OR

Withdrawal and cancellation of registration of trade union.
ಕಾರ್ಮಿಕ ಸಂಘದ ನೋಂದಾವಣಿಯ ಹಿಂಪಡೆಯುವಿಕೆ ಮತ್ತು ರದ್ದತಿ.

UNIT – 2

Q. No. 2. a) What is industry ? Explain with reference to decided cases. Marks : 10
ಉದ್ದಿಮೆ ಎಂದರೇನು ? ನಿರ್ಧಾರಿತ ಪ್ರಕರಣಗಳೊಂದಿಗೆ ವಿವರಿಸಿ.

OR

Explain the law relating to voluntary arbitration under the Industrial Dispute Act, 1947.
ಸ್ವಯಂಪ್ರೇರಿತ ಮಧ್ಯಸ್ಥಿಕೆ ಕುರಿತಾದ ಕಾನೂನನ್ನು ಔದ್ಯೋಗಿಕ ವ್ಯಾಜ್ಯಗಳ ಅಧಿನಿಯಮ 1947ರಂತೆ ವಿವರಿಸಿ.

Q. No. 2. b) Write short note on **any one** : Marks : 6

ಯಾವುದಾದರೂ ಒಂದಕ್ಕೆ ಲಘು ಟಿಪ್ಪಣಿ ಬರೆಯಿರಿ :

Award and settlement.

ಐತೀರ್ಪು ಮತ್ತು ಇತ್ಯರ್ಥ.

OR

Government's power of reference u/s 10.

ಔದ್ಯೋಗಿಕ ವ್ಯಾಜ್ಯಗಳನ್ನು ಕಾರ್ಮಿಕ ನ್ಯಾಯಾಲಯಕ್ಕೆ ಕಳಿಸುವ ಕುರಿತು ಕಲಮು 10ರಡಿಯಲ್ಲಿ ಸರಕಾರದ ಅಧಿಕಾರ.

UNIT – 3

Q. No. 3. a) Define strike and lockout. Explain with reference to decided cases. Marks : 10

ಮುಷ್ಕರ ಮತ್ತು ಬೀಗಮುದ್ರೆ ಎಂದರೇನು ? ನಿರ್ಧಾರಿತ ಪ್ರಕರಣಗಳೊಂದಿಗೆ ವಿವರಿಸಿ.

OR

What is retrenchment ? Explain the provisions relating to regulation of retrenchment.

ವಜಾಗೊಳಿಸುವಿಕೆ ಎಂದರೇನು ? ವಜಾಗೊಳಿಸುವಿಕೆಯನ್ನು ನಿಯಂತ್ರಿಸುವ ಕುರಿತಾದ ಕಾನೂನನ್ನು ವಿವರಿಸಿ.

Q. No. 3. b) Write short note on **any one** : Marks : 6

ಯಾವುದಾದರೂ ಒಂದಕ್ಕೆ ಲಘು ಟಿಪ್ಪಣಿ ಬರೆಯಿರಿ :

Lay-off.

ತಾತ್ಕಾಲಿಕ ವಜಾಗೊಳಿಸುವಿಕೆ.

OR

Notice of change u/s 9A.

ಕಲಮು 9Aರಡಿಯಲ್ಲಿ ಬದಲಾವಣೆಯ ಸೂಚನೆ.



UNIT – 4

Q. No. 4. a) Explain employer's liability under the Employees' Compensation Act, 1923 for personal injuries. Marks : 10

ನೌಕರರ ಪರಿಹಾರ ಅಧಿನಿಯಮ 1923ರ ಪ್ರಕಾರ ಕಾರ್ಮಿಕರ ವೈಯಕ್ತಿಕ ಹಾನಿಗಾಗಿ ಮಾಲಕರ ಬಾಧ್ಯತೆಯನ್ನು ವಿವರಿಸಿ.

OR

Explain various benefits available under the Employees State Insurance Act, 1948.

ನೌಕರರ ರಾಜ್ಯ ವಿಮಾ ಅಧಿನಿಯಮ 1948ರಲ್ಲಿ ಸಿಗುವ ವಿವಿಧ ಸವಲತ್ತುಗಳನ್ನು ವಿವರಿಸಿ.

Q. No. 4. b) Write short note on **any one** : Marks : 6

ಯಾವುದಾದರೂ ಒಂದಕ್ಕೆ ಲಘು ಟಿಪ್ಪಣಿ ಬರೆಯಿರಿ :

Partial disablement and total disablement.

ಭಾಗಶಃ ನ್ಯೂನತೆ ಮತ್ತು ಸಂಪೂರ್ಣ ನ್ಯೂನತೆ.

OR

ESI Courts.

ಇ.ಎಸ್.ಐ. ನ್ಯಾಯಾಲಯಗಳು.

UNIT – 5

Q. No. 5. a) Define wages and explain the objectives of the Payment of Wages Act, 1936. Marks : 10

ವೇತನವನ್ನು ವ್ಯಾಖ್ಯಾನಿಸಿ. ವೇತನ ಸಂದಾಯ ಅಧಿನಿಯಮ 1936ರ ಉದ್ದೇಶಗಳನ್ನು ವಿವರಿಸಿ.

OR

Explain the provisions of the Factories Act relating to health and safety of workers in a factory.

ಆರೋಗ್ಯ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಕಾರ್ಖಾನೆ ಅಧಿನಿಯಮದ ಕಲಮುಗಳನ್ನು ವಿವರಿಸಿ.

Q. No. 5. b) Write short note on **any one** : Marks : 6

ಯಾವುದಾದರೂ ಒಂದಕ್ಕೆ ಲಘು ಟಿಪ್ಪಣಿ ಬರೆಯಿರಿ :

Illegal deductions.

ಕಾನೂನೇತರ ಕಡಿತಗಳು.

OR

Manufacturing process.

ಉತ್ಪಾದನಾ ಪ್ರಕ್ರಿಯೆ.

---

0302/0722/2052

**III Semester 3 Year LL.B./VII Semester 5 Year B.A., LL.B. (Maj.-Min. System)/ B.A., LL.B./B.B.A., LL.B. Examination, Nov./Dec. 2020**

# LABOUR LAW (Old and New)

Duration : 3 Hours | Max. Marks : 100

**Instructions :**
1. **Answer Q.No. 9 and any five of the remaining questions.**
2. **Q.No. 9 carries 20 marks and the remaining questions carry 16 marks each.**
3. **Answers should be written either in English or Kannada completely.**

Q. No. 1. Discuss the mechanism provided under Industrial Disputes Act, 1947 for adjudication and settlement of disputes. Marks : 16

ಔದ್ಯೋಗಿಕ ವಿವಾದಗಳ ಕಾಯ್ದೆ, 1947ರ ಅಡಿಯಲ್ಲಿ ಔದ್ಯೋಗಿಕ ವಿವಾದಗಳ ನಿರ್ಣಯ ಮತ್ತು ಇತ್ಯರ್ಥಕ್ಕಾಗಿ ಇರುವ ಕಾರ್ಯ ವಿಧಾನವನ್ನು ಚರ್ಚಿಸಿ.

Q. No. 2. Explain the provisions relating to regulations of strikes under Industrial Disputes Act with the help of decided cases. Marks : 16

ಔದ್ಯೋಗಿಕ ವಿವಾದಗಳ ಕಾಯ್ದೆಯಲ್ಲಿ ಮುಷ್ಕರ ನಿರ್ವಹಣೆ ಕುರಿತಾದ ಉಪಬಂಧಗಳನ್ನು ನಿರ್ಧರಿತ ಪ್ರಕರಣಗಳ ಸಹಾಯದಿಂದ ವಿವರಿಸಿರಿ.

Q. No. 3. Discuss the powers and functions of the Commissioner under the Employee's Compensation Act. Marks : 16

ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದಡಿಯಲ್ಲಿ ಆಯುಕ್ತರ ಅಧಿಕಾರ ಹಾಗೂ ಕಾರ್ಯಗಳನ್ನು ಚರ್ಚಿಸಿರಿ.

Q. No. 4. Explain constitution, powers and procedure of the ESI Court. Marks : 16

ಕಾರ್ಮಿಕರ ವಿಮಾ ನ್ಯಾಯಾಲಯದ ರಚನೆ, ಅಧಿಕಾರಗಳು ಮತ್ತು ಪ್ರಕ್ರಿಯೆಗಳನ್ನು ವಿವರಿಸಿ.

Q. No. 5. Outline the provisions relating to the welfare measures under the Factories Act, 1948. Marks : 16

ಕಾರ್ಖಾನೆಗಳ ಅಧಿನಿಯಮ, 1948ರಡಿ ಕ್ಷೇಮಾಭ್ಯುದಯ ಕ್ರಮಗಳ ಕುರಿತು ಇರುವ ಉಪಬಂಧಗಳನ್ನು ಬರೆಯಿರಿ.

Q. No. 6. Discuss the provisions of trade union Act, 1926 relating to registration and cancellation of trade unions. Marks : 16

ಕಾರ್ಮಿಕ ಸಂಘಟನೆಗಳ ಅಧಿನಿಯಮ, 1926ರಲ್ಲಿ ಕಾರ್ಮಿಕರ ಸಂಘಗಳ ನೋಂದಾವಣೆ ಮತ್ತು ರದ್ದತಿಗಳ ಬಗ್ಗೆ ಇರುವ ಉಪಬಂಧಗಳನ್ನು ಚರ್ಚಿಸಿರಿ.

Q. No. 7. Explain the objectives of payment of wages act and what are the permissible deductions. Marks : 16

ವೇತನಗಳ ಸಂದಾಯ ಕಾಯ್ದೆಯ ಉದ್ದೇಶಗಳನ್ನು ವಿವರಿಸಿ ಮತ್ತು ಅನುಮೋದಿಸಲ್ಪಡುವ ಕಡಿತಗಳೆಂದರೆ ಯಾವುವು ?

Q. No. 8. Write short notes on **any two** of the following : Marks : 2x8=16

ಯಾವುದಾದರೂ ಎರಡರ ಕುರಿತು ಲಘು ಟಿಪ್ಪಣಿ ಬರೆಯಿರಿ :

a) Appropriate Government

ಸೂಕ್ತ ಸರಕಾರ

b) Collective bargaining

ಸಾಮೂಹಿಕ ಚೌಕಾಸಿ

c) General fund.

ಸಾಮಾನ್ಯ ನಿಧಿ.

Q. No. 9. Solve **any two** of the following problems. Marks : 2x10=20

ಯಾವುದಾದರೂ ಎರಡು ಸಮಸ್ಯೆಗಳನ್ನು ಪರಿಹರಿಸಿ.

a) A workman while performing the duty of the employer died due to an accident. It was proved that at the time of accident the workman was under the influence of intoxication. Whether the employer is liable to pay compensation ?

ಒಬ್ಬ ಕೆಲಸಗಾರನು ಮಾಲಿಕನ ಕರ್ತವ್ಯವನ್ನು ನಿರ್ವಹಿಸುವಾಗ ಅಪಘಾತದ ಕಾರಣದಿಂದ ನಿಧನ ಹೊಂದುತ್ತಾನೆ. ಅಪಘಾತ ಸಂಭವಿಸುವ ಸಂದರ್ಭದಲ್ಲಿ ಕೆಲಸಗಾರನು ಮದ್ಯದ ಅಮಲಿನಲ್ಲಿ ಇದ್ದ ಎಂಬದು ಸಾಬೀತಾಗುತ್ತದೆ. ಮಾಲಿಕನು ಪರಿಹಾರ ಕೊಡಲು ಬಾಧ್ಯಸ್ಥನೆ ?



b) In an industry there was continuous unrest leading to strikes and lockouts. The employer closed down the industry. Does this amount to closure ? Give reasons.

ಒಂದು ಕೈಗಾರಿಕೆಯಲ್ಲಿ ನಿರಂತರ ಅಸಮಾಧಾನವು ಮುಷ್ಕರ ಮತ್ತು ಬೀಗ ಮುದ್ರೆಗಳಿಗೆ ದಾರಿ ಮಾಡಿಕೊಡುತ್ತಿತ್ತು. ಮಾಲಿಕನು ಕೈಗಾರಿಕೆಯನ್ನು ಮುಚ್ಚಿದನು. ಇದು ಕೈಗಾರಿಕೆಯ ಮುಚ್ಚುವಿಕೆ ಎನಿಸಿಕೊಳ್ಳುತ್ತದೆಯೇ ? ಕಾರಣ ಕೊಡಿರಿ.

c) Rama industries managed by two partners namely Nambi and Govind, got dissolved. The industrial unit was taken over by Nalini industries with different partners. Nalini industries contended that they are not bound by the certified standing orders agreed by the said two partners of Rama industries. Is the contention of Nalini industries correct ? Decide.

ನಂಬಿ ಮತ್ತು ಗೋವಿಂದ ನಿರ್ವಹಣೆಗೆ ಒಳಪಟ್ಟ ರಾಮ ಪಾಲುದಾರಿಕೆ ಕೈಗಾರಿಕೆಯು ವಿಸರ್ಜನೆಯಾದ ನಂತರ ನಳಿನಿ ಕೈಗಾರಿಕೆಯ ವಿಭಿನ್ನ ಪಾಲುದಾರರು ಒಡೆತನವನ್ನು ಹೊಂದುತ್ತಾರೆ. ರಾಮಾ ಪಾಲುದಾರಿಕೆ ಕೈಗಾರಿಕೆಯ ಇಬ್ಬರು ಪಾಲುದಾರರು ಒಪ್ಪಿದ ಸ್ಥಾಯಿ ಪ್ರಮಾಣಬದ್ಧ ಆದೇಶ ನಳಿನಿ ಕೈಗಾರಿಕೆಗೆ ಬಂಧನಕಾರಿಯಲ್ಲವೆಂದು ವಾದಿಸುತ್ತಾರೆ. ನಳಿನಿ ಕೈಗಾರಿಕೆಯ ವಾದವು ಸರಿಯೇ ? ನಿರ್ಧರಿಸಿ.

---